ತಲಾ ರೂ. 20.00 ಕೋಟಿಗಳ ಒಟ್ಟು ರೂ.40.00 ಕೋಟಿ ಮಾರ್ಜಿನ್ ಹಣವನ್ನು ಮೂರು ಕಂತುಗಳಲ್ಲಿ ನಿಗಮಕ್ಕೆ ಬಿಡುಗಡೆ ಮಾಡಿರುತ್ತಾರೆ.

ಈ) ನೇಕಾರರ ವಸತಿ ಹಾಗೂ ಕಾರ್ಯಾಗಾರಗಳ ಸಾಲ ಮನ್ನಾ ಅಂದರೆ ಡಚ್ ಆರ್ಥಿಕ ನೆರವಿನಿಂದ ಮತ್ತು ಕೇಂದ್ರ ಪುರಸ್ಕೃತ ಯೋಜನೆಯಡಿ ಕಟ್ಟಿಸಿದ ವಸತಿ ಹಾಗೂ ಕಾರ್ಯಾಗಾರಗಳ ಮೇಲಿನ ಸಾಲ ಮತ್ತು ಬಡ್ಡಿ ಮನ್ನಾ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ನೇಕಾರರ ಬೇಡಿಕೆಯಂತೆ ಪರಿವರ್ತನಾ ದರವನ್ನು ಈಗಾಗಲೇ ದಿನಾಂಕ:01–06–2008 ರಿಂದ ಅನ್ವಯವಾಗುವಂತೆ ಪರಿಷ್ಕರಣೆ ಮಾಡಿ ಶೇ.3 ರಿಂದ 35 ರಷ್ಟು ಹೆಚ್ಚಿಸಲಾಗಿದೆ. ಮುಂದುವರೆದು ನಿಗಮದ ಇತ್ತೀಚಿನ ಆಡಳಿತ ಮಂಡಳಿ ಸಭೆ 30–06–2009 ರಂದು ಚರ್ಚಿಸಿ ಪರಿವರ್ತನಾ ದರವನ್ನು ಮತ್ತೆ ಹೆಚ್ಚಿಸಲು ಅನುಮೋದಿಸಲಾಗಿದೆ.

241 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಳ–ಸಾವಳಗಿ ಏತ ನೀರಾವರಿ ಮೂಲಕ ರೈತರ ಜಮೀನಿಗೆ ನೀರು ಕೊಡುವ ನಿಗದಿತ ಸಮಯವನ್ನು ತಿಳಿಸುವುದು;

ಆ) ಈ ಭಾಗದ ಜಮೀನಿನ ನೀರಾವರಿಗೆ ಯು.ಕೆ.ಪಿ.ಯ ಹಿನ್ನೀರಿನಲ್ಲಿ ಎಷ್ಟು ನೀರನ್ನು ಮೀಸಲಿರಿಸಿದೆ;

ಇ) ಸದರಿ ಯೋಜನೆಯ ತುತ್ತ ತುದಿಯ ಜಮೀನುಗಳಿಗೂ ನೀರು ಕೊಡಲು ಕೃಷ್ಣಾ ನದಿಯ ತುಬಚಿ ಹತ್ತಿರ ಇನ್ನೊಂದು ಏತ ನೀರಾವರಿ ಜೋಡಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) 2010–11 ರೊಳಗಾಗಿ ಪೂರ್ಣಗೊಳಿಸಿ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಆ) ಮೀಸಲಿರಿಸಿಲ್ಲ.

ಇ) ತುಬಚಿ ಹತ್ತಿರ ಇನ್ನೊಂದು ಏತ ನೀರಾವರಿ ಯೋಜನೆಯ ಪ್ರಸ್ತಾವನೆ ಇರುವುದಿಲ್ಲ.